(ಇಂದು ದಿನಾಂಕಃ 28–11–2024 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ -

ವಿಪಿಸಿ ಸಂಖ್ಯೆ 26 ಎ ಮತ್ತು 26 ಬಿ ಆಸ್ತಿಗಳು ಹೊಂದಿಕೊಂಡು ಇದ್ದು ನನಗೆ ಸೇರಿದ ಆಸ್ತಿ ಎಂದರೆ ಸರಿ. ವಿಪಿಸಿ ಸಂಖ್ಯೆ 26 ಎ ರ ಪೂರ್ವಕ್ಕೆ ವಿಪಿಸಿ ಸಂಖ್ಯೆ 24 ಇದೆ ಎಂದರೆ ಸರಿ. ಅದು ಹಿರೇಮಠರವರ ಆಸ್ತಿ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಹರ್ತಿರವರ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ.

ವಿಪಿಸಿ ಸಂಖ್ಯೆ 26 ಬಿ ರ ಪಶ್ಚಿಮಕ್ಕೆ ವಿಪಿಸಿ ಸಂಖ್ಯೆ 26 ಸಿ ವಾದಿಯರ ಆಸ್ತಿ ಇದೆ ಎಂದರೆ ಸರಿ. ಸಾಕ್ಷಿಗೆ ಈಗ ವಾದಿಯರು ಸಲ್ಲಿಸಿದ ಹಾತನಕಾಶೆಯನ್ನು ತೋರಿಸಿ ಅದರಲ್ಲಿ ಎ,ಬಿ,ಸಿ,ಡಿ ಎಂದು ಗುರುತಿಸಲಾದ ಭಾಗವನ್ನು ದಾವಾ ಆಸ್ತಿ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ದಾವಾ ಆಸ್ತಿ ಏನು ಅಂತಾ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನನ್ನ ಕೈಪಿತನ 8 ನೇ ಕಂಡಿಕೆಯಲ್ಲಿ ದಿನಾಂಕ 23-09-2015 ರಂದು ವಿಪಿಸಿ ಸಂಖ್ಯೆ 25 ಎ ಮತ್ತು 25 ಬಿ ಆಸ್ತಿಯನ್ನು ಜಯದೇವಯ್ಯಾ ಮೃತ್ಯಂಜಯ್ಯಾ ಹಿರೇಮಠ ಹಾಗೂ ಶ್ರೀಮತಿ ಗೀತಾ ಶಿವಪುತ್ರಯ್ಯಾ ಹಿರೇಮಠ ರವರಿಂದ ಖರೀದಿ ಪಡೆದಿರುತ್ತೇನೆ ಎಂದು ನಮೂದು ಮಾಡಿದ್ದು ಅದರ ಬಗ್ಗೆ ಖರೀದಿ ಪತ್ರವನ್ನು ನ್ಯಾಯಾಲಯದ ಎದುರು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಾವು ಹಾಜರು ಪಡಿಸಿದ ದಾಖಲೆಗಳನ್ನು ತೋರಿಸಿ ಸಾಕ್ಷಿ ಅದನ್ನು ಪರಿಶೀಲಿಸಿ ಅದರಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಖರೀದಿ ಕಾಗದದಲ್ಲಿ ಅಳತೆಯನ್ನು ನಮೂದು ಮಾಡಿರುತ್ತಾರೆ.

ಆಸ್ತಿಗಳು ನಲವಡಿ ಗ್ರಾಮಕ್ಕೆ ಸೇರಿದ್ದ ಆಸ್ತಿ ಎಂದರೆ ಸರಿ. ನಲವಡಿ ಗ್ರಾಮಕ್ಕೆ ವಿಲೇಜ್ ಸರ್ವೆ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಸಿಟಿ ಸರ್ವೆ ಆಗಿರುವುದಿಲ್ಲ ಆದರೆ ಇ-ಸ್ವತ್ತು ಆಗಿರುತ್ತದೆ ಎಂದು ನುಡಿಯುತ್ತಾರೆ.

ಖರೀದಿ ಕಾಗದದಲ್ಲಿ ಆಸ್ತಿಗಳ ಅಳತೆಯನ್ನು ಮೀಟರ ಲೆಕ್ಕದಲ್ಲಿ ನಮೂದು ಮಾಡಿರುತ್ತಾರೆ. *(At this stage since the document in question is not produced the witness has stated that he is the party to the document and has knowledge of the document. Hence the cross examination as to the contents of the documents without it being produced is permitted).*

ಜಯದೇವಯ್ಯಾ ಮೃತ್ಯಂಜಯ್ಯಾ ಹಿರೇಮಠ ಹಾಗೂ ಶ್ರೀಮತಿ ಗೀತಾ ಶಿವಪುತ್ರಯ್ಯಾ ಹಿರೇಮಠ ರವರಿಗೆ ಆಸ್ತಿಗಳು ಅವರ ಪೂರ್ವಜರಿಂದ ಬಂದಿರುತ್ತದೆ. ಸದರಿಯವರ ಆಸ್ತಿಗಳ

ವಿಸ್ತೀರ್ಣದ ಬಗ್ಗೆ ಮೂಲ ದಾಖಲೆ ಯಾವುದು ಎಂದು ನಾನು ಪರಿಶೀಲನೆ ಮಾಡಿಲ್ಲ. ಸಾಕ್ಷಿಯು ಮುಂದುವರೆದು ಅವರು ಇ-ಸ್ವತ್ತು ಮಾಡಿರುತ್ತಾರೆ ಅದರ ಆದಾರದ ಮೇಲೆ ನಾನು ಖರೀದಿ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ.

ಇ-ಸ್ವತ್ತು ಯಾವ ಆದಾರದ ಮೇಲೆ ಮಾಡಲಾಗಿರುತ್ತದೆ ಎಂದರೆ ಸಾಕ್ಷಿಯು ಖರೀದಿಗೆ ನೀಡಿದವರು ಅವರ ನಡುವೆ ಪಾಲುವಿಭಾಗವಾಗಿದ್ದು ಅದರ ಬಗ್ಗೆ ಪಂಚಾಯತನಲ್ಲಿ ದಾಖಲಾಗಿದ್ದು ಅದರ ಆದಾರದ ಮೇಲೆ ಇ-ಸ್ವತ್ತು ಮಾಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಪಾಲುವಿಭಾಗ ಪತ್ರ ನೋಂದಣಿ ಆಗಿದೆಯೊ ಇಲ್ಲವೊ ಎಂದು ನನಗೆ ಗೊತ್ತಿಲ್ಲ. ನಾನು ಸದರಿ ಪಾಲುವಿಭಾಗ ಪತ್ರವನ್ನು ನೋಡಿರುವುದಿಲ್ಲ.

ನಾನು ಖರೀದಿ ಪಡೆದ ಆಸ್ತಿಯ ಬಗ್ಗೆ ಪಂಚಾಯತನಲ್ಲಿ ಮೂಲ ದಾಖಲೆಗಳು ನಮೂದು ಆಗಿರುತ್ತವೆ. ಸದರಿ ದಾಖಲೆಗಳನ್ನು ನಾನು ನೋಡಿಲ್ಲ. ಇ-ಸ್ವತ್ತು ಹಾಲಿ 2-3 ವರ್ಷಗಳಿಂದ ಜಾರಿಗೆ ಬಂದ ಒಂದು ಪ್ರಕ್ರಿಯೆ ಎಂದರೆ ಸರಿ. ಇ-ಸ್ವತ್ತು ಆಗುವ ಪೂರ್ವದಲ್ಲಿ ನನಗೆ ಖರೀದಿ ನೀಡಿದವರ ಆಸ್ತಿಯ ದಾಖಲೆಗಳು ಪಂಚಾಯತನಲ್ಲಿ ನಮೂದು ಇತ್ತು ಎಂದರೆ ಸರಿ. ಸದರಿ ದಾಖಲೆಗಳಲ್ಲಿ ಆಸ್ತಿಯ ವಿಸ್ತೀರ್ಣ, ಉದ್ದ, ಅಗಲ ನಮೂದು ಇರುವುದಿಲ್ಲ ಎಂದರೆ ಸರಿ.

ನಾನು ನನ್ನ ಪ್ರತಿವಾದ ಪತ್ರದ 8 ನೇ ಕಂಡಿಕೆಯಲ್ಲಿ ವಿಪಿಸಿ ಸಂಖ್ಯೆ 25 ಎ ರ ವಿಸ್ತೀರ್ಣವನ್ನು ಸುಳ್ಳಾಗಿ ನಮೂದು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸದರಿ ವಿಪಿಸಿ ಸಂಖ್ಯೆ 25 ಎ ರ ವಿಸ್ತೀರ್ಣ ತೋರಿಸಲು ಯಾವುದೇ ಮೂಲ ದಾಖಲೆಗಳು ಇರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಇ-ಸ್ವತ್ತು ಇರುತ್ತದೆ ಎಂದು ನುಡಿಯುತ್ತಾರೆ.

ಇ-ಸ್ವತ್ತು ಮಾಡಲು ಯಾವ ದಾಖಲೆಯ ಆದಾರದ ಮೇಲೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ನಾನು ಮಾಡಿರುವುದಿಲ್ಲ ನನಗೆ ಖರೀದಿ ನೀಡಿದವರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

***(At this stage the witness is not able to understand the questions that are being advanced to him. Hence the cross of witness is adjourned)***

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**